

ಪುತ್ತೂರು: ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವರ್ಗದಾರ ಕೃಷಿಕರ ಕುಮ್ಕಿ ಭೂಮಿಯನ್ನು ಅವರಿಗೆ ಮಂಜೂರುಗೊಳಿಸುವ ಕುರಿತ ಆದೇಶವನ್ನು ಕೂಡಲೇ ಹೊರಡಿಸುವಂತೆ ಸಂಸದ ನಳಿನ್ ಕುಮಾರ್ ಕಟೀಲು ನೇತೃತ್ವದ ದ.ಕ. ಜಿಲ್ಲಾ ಶಾಸಕರ ನಿಯೋಗ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಭೇಟಿ ಮಾಡಿ ಮನವಿ ನೀಡಿತು. ನಿಯೋಗದಲ್ಲಿ ವಿಧಾನ ಪರಿಷತ್ ಸದಸ್ಯರಾದ ಕ್ಯಾ। ಗಣೇಶ್ ಕಾರ್ಣಿಕ್, ಕೆ. ಮೋನಪ್ಪ ಭಂಡಾರಿ, ಶಾಸಕರಾದ ಮಲ್ಲಿಕಾ ಪ್ರಸಾದ್, ಕೃಷ್ಣ ಜೆ. ಪಾಲೆಮಾರ್, ವಿಧಾನಸಭಾ ಉಪಸಭಾಧ್ಯಕ್ಷ ಎನ್. ಯೋಗೀಶ್ ಭಟ್ ಮೊದಲಾದವರಿದ್ದರು.

# ಸಿಎಂ ಪರಿಹಾರ ನಿಧಿಯಿಂದ 5.51 ಲಕ್ಷ ರೂ. ಬಿಡುಗಡೆ

ಕಾಪು, ಫೆ. 15: ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನಾರೋಗ್ಯ ಪೀಡಿತ ಬಡರೋಗಿಗಳಿಗೆ ಕಾಪು ಶಾಸಕ ಲಾಲಾಜಿ ಆರ್. ಮೆಂಡನ್ ಅವರ ಶಿಫಾರಸ್ಸಿನ ಮೇರೆಗೆ ಸಿಎಂ ಪರಿಹಾರ ನಿಧಿಯಿಂದ 5,51,000 ರೂ. ಬಿಡುಗಡೆಯಾಗಿದೆ.

ಫಲಾನುಭವಿಗಳ ವಿವರ: ಫಜಲುಲ್ಲಾ ಮಲ್ಲಾರು ಗ್ರಾಮ ರೂ. 60,000, ಅಬ್ದುಲ್ ಹಮೀದ್ ಕಿಲ್ಪಾಡಿ ರೂ. 50,000, ಸೋಮಪ್ಪ ಬಂಟಕಲ್ಲು ಗ್ರಾಮ, ಸೈಯದ್ ಅಹಮ್ಮದ್ ಉಚ್ಚಿಲ ಇವರಿಗೆ ತಲಾ ರೂ. 40,000, ಚಂದ್ರಶೇಖರ ಶೆಟ್ಟಿ ಪೆರ್ಡೂರು ಗ್ರಾಮ, ಶಂಕರ ಶೆಟ್ಟಿ ಹಾವಂಜೆ ಗ್ರಾಮ, ನರಸಿಂಹ ಶೆಟ್ಟಿ ಬೊಮ್ಮರಬೆಟ್ಟು ಇವರಿಗೆ ತಲಾ ರೂ. 35,000, ಮಾ। ರೋಶನ್ ಮುಂಡಾರು ಗ್ರಾಮ ಇವರಿಗೆ ರೂ. 30,000, ಐತಪ್ಪ ದೇವಾಡಿಗ ನಡ್ಸಾಲು ಗ್ರಾಮ, ವಾಮನ ಕೋಟ್ಯಾನ್ ಕಾಡಿಪಟ್ನ ಇವರಿಗೆ ತಲಾ ರೂ. 25,000, ಜಯಂತಿ ನಾಡ ಗ್ರಾಮ, ಆಶಾ ಪಿ. ಪಾಂಗಾಳ, ಸುದರ್ಶನ ರಾವ್ ಕುರ್ಕಾಲು, ರಫೀಕ್ ಅಹಮ್ಮದ್ ಮೂಳೂರು ಇವರಿಗೆ ತಲಾ ರೂ 20,000, ಕೆ. ಮಾಧವ ಮಲ್ಲಾರು ಗ್ರಾಮ, ವಿಠಲ ಸುವರ್ಣ ಎರ್ಮಾಳ್ ಬಡಾ, ಹರೀಶ್ ಆಚಾರ್ಯ ತೆಂಕ ಗ್ರಾಮ, ಮಹಮ್ಮದ್ ಗೌಸ್ ಎಲ್ಲೂರು ಗ್ರಾಮ ಇವರಿಗೆ ತಲಾ ರೂ. 15,000, ಶೋಭಾ ಆರ್. ಅಮೀನ್ ಎರ್ಮಾಳ್ ಗ್ರಾಮ, ಕೆ. ಕುಂಜಣ್ಣ ಕುರ್ಕಾಲು, ಪುಷ್ಪ ಪುತ್ರನ್ ಉಳಿಯಾರಗೋಳಿ ಇವರಿಗೆ ತಲಾ 10,000, ತಾಜುದ್ದೀನ್ ಸಾಹೇಬ್ ಶಿರ್ವ ಗ್ರಾಮ ರೂ. 6,000 ಬಿಡುಗಡೆಯಾಗಿದೆ ಎಂದು ಶಾಸಕ ಲಾಲಾಜಿ ಆರ್. ಮೆಂಡನ್ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ತುಳುನಾಡ ಸಿರಿ ಮದಿಪು - 2013

# ಬೆಳ್ತಂಗಡಿ ಸರಕಾರಿ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೂಡಬಿದಿರೆ, ಫೆ. 15: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮೂಡಬಿದಿರೆಯ ತುಳುಕೂಟ ಮತ್ತು ಶ್ರೀ ಮಹಾವೀರ ಕಾಲೇಜಿನ ಆಶ್ರಯದಲ್ಲಿ ಮಹಾವೀರ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ತುಳು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ 'ತುಳುನಾಡ ಸಿರಿ-ಮದಿಪು: 2013'ರಲ್ಲಿ ಬೆಳ್ತಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿದೆ.

ಸಾಮೂಹಿಕ ವಿಭಾಗದಲ್ಲಿ ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜು, ಸುಂಕದಕಟ್ಟೆ ಎಸ್‌ಎನ್ ಎಸ್ ಕಾಲೇಜು ಹಾಗೂ ಬೆಳ್ತಂಗಡಿ ಸರಕಾರಿ ಕಾಲೇಜು ಅನುಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದಿವೆ.

**ವೈಯಕ್ತಿಕ ವಿಭಾಗದ ಸ್ಪರ್ಧೆಗಳ ಫಲಿತಾಂಶ**

ವರ್ಣಚಿತ್ರ ರಚನೆ - ಪ್ರಥಮ: ಭುವನೇಂದ್ರ ಕಾಲೇಜಿನ ಹರ್ಷಿತಾ ರಾವ್, ದ್ವಿತೀಯ: ಬೆಳ್ತಂಗಡಿ ಸರಕಾರಿ ಕಾಲೇಜಿನ ಸುನೀತಾ. ಲಿಖಿತ ರಸ ಪ್ರಶ್ನೆ - ಪ್ರಥಮ: ಸುಂಕದಕಟ್ಟೆ ಎಸ್‌ಎನ್‌ಎಸ್ ಕಾಲೇಜಿನ ತೇಜಾಕ್ಷಿ, ದ್ವಿತೀಯ: ವಾಮಂಜೂರು ಸರಕಾರಿ ಪ್ರ.ದ. ಕಾಲೇಜಿನ ತಿಮ್ಮಪ್ಪ ಅವಿನಾಶ್. ಹೂಮಾಲೆ ಕಟ್ಟುವ ಸ್ಪರ್ಧೆ- ಪ್ರಥಮ: ವಾಮದಪದವು ಸ. ಕಾಲೇಜಿನ ರಶ್ಮಿತಾ, ದ್ವಿತೀಯ: ಬೆಳ್ತಂಗಡಿ ಸ. ಕಾಲೇಜಿನ ಸುಧಾ. ರಂಗೋಲಿ- ಪ್ರಥಮ: ಸಿದ್ಧಕಟ್ಟೆ ಸ.ಪ್ರ.ದ. ಕಾಲೇಜಿನ ಶ್ವೇತಾ, ದ್ವಿತೀಯ: ಸುಂಕದಕಟ್ಟೆ ಎಸ್‌ಎನ್‌ಎಸ್ ಕಾಲೇಜಿನ ಅಮೃತಾ. ಸ್ಥಳನಾಮ ಭಾಷಣ- ಪ್ರಥಮ: ಬೆಳ್ತಂಗಡಿ ಸ. ಕಾಲೇಜಿನ ಸಂತೋಷ್ ಶೆಟ್ಟಿ, ದ್ವಿತೀಯ: ವೇಣೂರಿನ ವಿದ್ಯೋದಯ ಕಾಲೇಜಿನ ಕರುಣಾಕರ ಶೆಟ್ಟಿ.

ಸಮಾರೋಪ ಸಮಾರಂಭದಲ್ಲಿ ಮುಂಬಯಿ ಹೆಗ್ಗಡೆ ಸಮಾಜ ಸಂಘದ ಅಧ್ಯಕ್ಷ ವಿಜಯ ಹೆಗ್ಡೆ (ಪಡುಕೋಣಾಜೆ) ಬಹುಮಾನ ವಿತರಿಸಿದರು.

ಸಿಂಡಿಕೇಟ್ ಬ್ಯಾಂಕ್ ಕೊಡಂಗಲ್ಲು ಶಾಖಾ ಪ್ರಬಂಧಕ ನಾರಾಯಣ ನಾಯ್ಕ್ ಮುಖ್ಯ ಅತಿಥಿಯಾಗಿದ್ದರು.

ತುಳುಕೂಟದ ಅಧ್ಯಕ್ಷ ಸುಭಾಶ್ಚಂದ್ರ ಪಡಿವಾಳ್ ಸಮಾರೋಪ ಭಾಷಣ ಮಾಡಿದರು. ಮಹಾವೀರ ಕಾಲೇಜಿನ ಪ್ರಾಚಾರ್ಯ ಡಾ। ಎನ್. ಹಾಲಾ ನಾಯ್ಕ್, ಕಾರ್ಯಕ್ರಮದ ಮುಖ್ಯ ಸಂಯೋಜಕ ಪ್ರೊ। ಮಧೂರು ಮೋಹನ ಕಲ್ಲೂರಾಯ, ಸಂಯೋಜಕರಾದ ಕ್ಯಾ। ರಾಧಾಕೃಷ್ಣ ಶೆಟ್ಟಿ, ಪ್ರೊ। ಹರೀಶ್ ಮೊದಲಾದವರು ಉಪಸ್ಥಿತರಿದ್ದರು.

ಉಪನ್ಯಾಸಕಿ ಸುಲೋಚನಾ ಪಚ್ಚಿನಡ್ಕ ಕಾರ್ಯಕ್ರಮ ನಿರೂಪಿಸಿದರು. ತುಳುಕೂಟದ ಕಾರ್ಯಾಧ್ಯಕ್ಷ ಚಂದ್ರಹಾಸ ದೇವಾಡಿಗ ವಂದಿಸಿದರು..

# ಮಚ್ಚಟ್ಟು ಪರಿಸರದಲ್ಲಿ ಭೀತಿ ಸೃಷ್ಟಿಸಿದ ಚಿರತೆ



ಸಿದ್ದಾಪುರ, ಫೆ. 15: ಕುಂದಾಪುರ ತಾಲೂಕು ಮಚ್ಚಟ್ಟು ಗ್ರಾಮದ ರಾಮ ಬೋವಿ ಅವರ ಮನೆಯ ಸಮೀಪದ ಮರವೇರಿದ ಚಿರತೆಯೊಂದು ಪರಿಸರದ ಜನರನ್ನು ದಿನವಿಡೀ ಭಯದಲ್ಲಿ ಕೆಡವಿತು.

ಬುಧವಾರ ರಾತ್ರಿ ರಾಮ ಬೋವಿ ಅವರ ಸಾಕುನಾಯಿಯನ್ನು ಬೇಟೆಯಾಡಿದ ಚಿರತೆ ಮರವೇರಿ ಕುಳಿತಿತ್ತು. ನಾಯಿಯ ಆಕ್ರಂದನ ಕೇಳಿದ ಮನೆಮಂದಿ ಹೊರಬಂದು ನೋಡುವಷ್ಟರಲ್ಲಿ ಚಿರತೆ ಮರವೇರಿತ್ತು. ರಾತ್ರಿಯಿಡೀ ಚಿರತೆ ಘರ್ಜಿಸುತ್ತ ಪರಿಸರದಲ್ಲಿ ಭೀತಿ ಸೃಷ್ಟಿಸಿತ್ತು.

ಗುರುವಾರ ಆಗಮಿಸಿದ ಅರಣ್ಯ ಇಲಾಖೆ ಸಿಬಂದಿ ಮಧ್ಯಾಹ್ನದ ವೇಳೆಗೆ ಶ್ರಮವಹಿಸಿ ಚಿರತೆಯನ್ನು ಮರದಿಂದ ಕೆಳಗಿಳಿಯುವಂತೆ ಮಾಡಿ, ಅರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾಯಿತು. ಹಲವು ದಿನಗಳಿಂದ ಈ ಭಾಗದಲ್ಲಿ ಚಿರತೆಗಳು ಸಂಚರಿಸುತ್ತಿದ್ದು ಅನೇಕ ಸಾಕು ನಾಯಿಗಳನ್ನು ಬೇಟೆಯಾಡಿದೆ ಎಂದು ಸ್ಥಳೀಯರು ಹೇಳುತ್ತಾರೆ.

## ಅಂಚೆ ತೆರಪಿನ ಕೋರ್ಸ್ ಪರೀಕ್ಷೆ ವಿವರ

ಮಂಗಳೂರು, ಫೆ. 15: ಮಂಗಳೂರು ವಿವಿಯ ಅಂಚೆ ತೆರಪಿನ ಕೋರ್ಸುಗಳ 2012-13ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಪರೀಕ್ಷೆಗಳು ಹಂಪನಕಟ್ಟೆ ವಿವಿ ಕಾಲೇಜಿನಲ್ಲಿ ಮೇ ತಿಂಗಳಲ್ಲಿ ನಡೆಯಲಿವೆ.

ಪದವಿ ಕೋರ್ಸುಗಳ ಪರೀಕ್ಷೆಗಳು ಮೇ 6ರಂದು ಪ್ರಾರಂಭಗೊಳ್ಳಲಿದ್ದು ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾ. 11 ಆಗಿರುತ್ತದೆ. ದಂಡ ಶುಲ್ಕ ಸಹಿತ ಕೊನೆಯ ದಿನಾಂಕ ಮಾ. 26 ಆಗಿರುತ್ತದೆ.

ಸ್ನಾತಕೋತ್ತರ ಪದವಿ ಕೋರ್ಸುಗಳ ಪರೀಕ್ಷೆಗಳು ಮೇ 20ರಂದು ಪ್ರಾರಂಭಗೊಳ್ಳಲಿದ್ದು ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾ. 30 ಹಾಗೂ ದಂಡಶುಲ್ಕ ಸಹಿತ ಕೊನೆಯ ದಿನಾಂಕ ಎ. 8 ಆಗಿರುತ್ತದೆ. ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾನಿಲಯದ ವೆಬ್ ಸೈಟ್‌ಗೆ ಭೇಟಿ ನೀಡಬಹುದು ಹಾಗೂ ದೂರವಾಣಿ ಸಂಖ್ಯೆ 2287824 ಸಂಪರ್ಕಿಸಬಹುದು.

# ಎಂಐಟಿ: ಸಿಐಎಫ್ ಉದ್ಘಾಟನೆ

ಉಡುಪಿ, ಫೆ. 15: ಮಣಿಪಾಲ ಎಂಐಟಿ ಸಂಶೋಧನಾ ಸೌಲಭ್ಯವಾದ ಸೆಂಟ್ರಲ್ ಇನ್‌ಸ್ಟ್ರುಮೆಂಟೇಶನ್ ಸೌಲಭ್ಯವನ್ನು (ಸಿಐಎಫ್) ಫೆ.16ರ ಬೆಳಗ್ಗೆ 10ಕ್ಕೆ ಇನ್ಫೋಸಿಸ್ ಅಧ್ಯಕ್ಷ, ಐಸಿಐಸಿಐ ಕಾರ್ಯನಿರ್ವಾಹಕೇತರ ಅಧ್ಯಕ್ಷ ಕೆ.ವಿ.ಕಾಮತ್ ಉದ್ಘಾಟಿಸುವರು.

ವಸ್ತುವಿಜ್ಞಾನ, ಜೈವಿಕ ತಂತ್ರಜ್ಞಾನ, ಆರ್ಗನಿಕ್ ಫೋಟೋವೋಲ್ಟಾಯಿಕ್ಸ್, ನ್ಯಾನೋ ತಂತ್ರಜ್ಞಾನ ಮತ್ತಿತರ ಕ್ಷೇತ್ರಗಳ ಸಂಶೋಧನೆಗಳಿಗೆ ಪೂರಕವಾಗಿ ಅಂತರ್‌ಶಿಸ್ತೀಯ ಸಂಶೋಧನಾ ಸೌಲಭ್ಯವನ್ನು ಸಿಐಎಫ್ ಒದಗಿಸಲಿದೆ. ಸಂಶೋಧಕರಿಗೆ ನೆರವಾಗಲು ಮಣಿಪಾಲ ವಿ.ವಿ. 10 ಕೋ.ರೂ. ಮೊತ್ತವನ್ನು ಇದಕ್ಕಾಗಿ ವಿನಿಯೋಗಿಸಿದೆ. ಇದೇ ವೇಳೆ ಮಣಿಪಾಲ ಯುನಿವರ್ಸಿಟಿ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್ ಆಯೋಜಿಸಿದ ರಾಜ್ಯ ಮಟ್ಟದ ಬಿಸಿನೆಸ್ ಪ್ಲಾನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕಾಮತ್ ಬಹುಮಾನ ವಿತರಿಸುವರು. 'ದಿ ಟೆಕ್ನಾಲಜಿ ಸ್ಟೋರಿ' ವಿಷಯ ಕುರಿತು ಉಪನ್ಯಾಸ ನೀಡುವರು ಎಂದು ಇನ್‌ಕ್ಯುಬೇಟರ್ ಸಿಇಒ, ಕಾರ್ಯದರ್ಶಿ ಡಾ।ಮನೋಹರ ಪೈ ಎಂ.ಎಂ. ತಿಳಿಸಿದ್ದಾರೆ.

## ಕೆ.ಎಂ.ಸಿ. ವಜ್ರ ಮಹೋತ್ಸವ ಉಪನ್ಯಾಸ

# ಕ್ಯಾನ್ಸರ್: ಅಗ್ಗದ ಔಷಧ ಸಂಶೋಧನೆಗೆ ಕರೆ

ಮಂಗಳೂರು, ಫೆ. 15: ಕಾನ್ಸರ್ ಚಿಕಿತ್ಸೆಗೆ ಕಡಿಮೆ ವೆಚ್ಚದ ಔಷಧ ಕಂಡುಕೊಳ್ಳಲು ಸಂಶೋಧನೆ ನಡೆಯಬೇಕಾಗಿದ್ದು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಮತ್ತು ವೈದ್ಯಕೀಯ ಸಂಶೋಧನಾ ವಿದ್ಯಾರ್ಥಿಗಳು ಈ ಬಗ್ಗೆ ಗಮನ ಹರಿಸಬೇಕು ಎಂದು ಶಿಕಾಗೊ ವಿವಿಯ ಪೆಥಾಲಜಿ ವಿಭಾಗದ ಮುಖ್ಯಸ್ಥ ಡಾ। ವಿನಯ್ ಕುಮಾರ್ ಹೇಳಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಜ್ರ ಮಹೋತ್ಸವದ ಅಂಗವಾಗಿ ಗುರುವಾರ ಇಲ್ಲಿನ ಡಾ। ಟಿ.ಎಂ.ಎ. ಪೈ ಇಂಟರ್ ನ್ಯಾಶನಲ್ ಕನ್ವೆನ್ಶನ್ ಸೆಂಟರ್‌ನಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು.

ಕ್ಯಾನ್ಸರಿಗೆ ದೇಶೀಯವಾಗಿ ಅಗ್ಗದ ದರದಲ್ಲಿ ಔಷಧಿ ಉತ್ಪಾದಿಸುವ ಬಗ್ಗೆ ಸಂಶೋಧನೆಗಳು ನಡೆಯಬೇಕು. ವೈದ್ಯಕೀಯ ಸಂಶೋಧಕರು ಇದನ್ನು ಸಾಮಾಜಿಕ ಜವಾಬ್ದಾರಿಯಾಗಿ ಕೈಗೆತ್ತಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಕ್ಯಾನ್ಸರ್‌ನಲ್ಲಿ ಹತ್ತು ಹಲವು ವಿಧಗಳಿದ್ದು, ಅವೆಲ್ಲವೂ ಒಂದೇ ರೀತಿ ಇಲ್ಲ. ಔಷಧಿ ಮತ್ತು ಚಿಕಿತ್ಸೆ ಕೂಡಾ ವಿಭಿನ್ನವಾಗಿವೆ ಎಂದು ಅವರು ವಿವರಿಸಿದರು.

ಶಿಕಾಗೊ ವಿಶ್ವವಿದ್ಯಾನಿಲಯದ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ। ಸ್ಕೊಟ್ ಸ್ಟರ್ನ್ ಅವರು ವಿವಿಧ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ಉಪನ್ಯಾಸ ನೀಡಿದರು.

ಕೆ.ಎಂ.ಸಿ. ಡೀನ್ ಡಾ। ಎಂ.ವಿ. ಪ್ರಭು ಸ್ವಾಗತಿಸಿದರು. ಡಾ। ಶಾರದಾ ರೈ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

# ಹಲಸು, ಜೇನು ಅಭಿವೃದ್ಧಿಗೆ ವಿಶೇಷ ಅಭಿಯಾನ

ಮಂಗಳೂರು, ಫೆ. 15: ರಾಜ್ಯದಲ್ಲಿ ಹಲಸು ಮತ್ತು ಜೇನು ಅಭಿವೃದ್ಧಿಗೆ ವಿಶೇಷ ಅಭಿಯಾನ ನಡೆಸಲಾಗುವುದು ಎಂದು ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹಲಸು ಮತ್ತು ಜೇನು ಸಂರಕ್ಷಣೆ ಹಾಗೂ ಅಭಿವೃದ್ಧಿ ಬಗ್ಗೆ ವಿಧಾನಸೌಧದಲ್ಲಿ ಫೆ. 6ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಕುರಿತು ನಿರ್ಧರಿಸಲಾಗಿದೆ. ಅರಣ್ಯ ಮತ್ತು ತೋಟಗಾರಿಕಾ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ, ಸಹಕಾರಿ ಸಂಸ್ಥೆಗಳು, ರೈತ ಸಂಘಟನೆಗಳು, ಅರಣ್ಯ ಸಮಿತಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಹಲಸು ಮತ್ತು ಜೇನು ಅಭಿವೃದ್ಧಿ ಕುರಿತು ನಿರಂತರ ಕಾರ್ಯ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು.

ಹಲಸು ಬೆಳೆಗಾರರ ಸಂಘ ಮತ್ತು ಒಕ್ಕೂಟ ರಚನೆ; ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ವಿಶೇಷ ಅಭಿಯಾನ ನಡೆಸುವುದು, ಹಲಸನ್ನು ಪ್ರಮುಖ ಬೆಳೆ ಎಂದು ಘೋಷಿಸುವುದು, ಹಲಸಿನ ಮೇಳಗಳ ವ್ಯವಸ್ಥೆ, ಹಲಸಿನ ಕಸಿ ಗಿಡ ತಯಾರಿ ಮತ್ತು ತಳಿ ಸಂರಕ್ಷಣಾ ಕೇಂದ್ರ ಸ್ಥಾಪನೆ, ಕಸಿ ತರಬೇತಿಗಾಗಿ ಕಾರ್ಯಾಗಾರ ಮತ್ತು ರಾಷ್ಟ್ರ ಮಟ್ಟದ ಸಮ್ಮೇಳನ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಅರಣ್ಯ ಇಲಾಖೆಯ ಜೇನು ಹರಾಜು ಪ್ರಕ್ರಿಯೆಯನ್ನು ನಿಲ್ಲಿಸಿ, ವನವಾಸಿಗಳಿಗೆ ಮತ್ತು ಅರಣ್ಯ ಸಮಿತಿಗಳಿಗೆ ಜೇನು ಸಂಗ್ರಹದ ಜವಾಬ್ದಾರಿ ವಹಿಸುವುದು, ಜೇನು ಸಂಗ್ರಹಕಾರರಿಗೆ ತರಬೇತಿ, ಜೇನು ಮೇಳಗಳನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ಅನಂತ ಹೆಗಡೆ ಆಶೀಸರ ಅವರು ತಿಳಿಸಿದರು.

# ಫೆ. 20, 21: ಸಾರ್ವತ್ರಿಕ ಮುಷ್ಕರ

ಮಂಗಳೂರು, ಫೆ. 15: ಕಾರ್ಮಿಕ ವರ್ಗದ ಮತ್ತು ಜನಸಾಮಾನ್ಯರ ತುರ್ತು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೇಶದ 11 ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಸ್ವತಂತ್ರ ಒಕ್ಕೂಟಗಳ ನೇತೃತ್ವದಲ್ಲಿ ಫೆ. 20 ಮತ್ತು 21ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಯಲಿದೆ ಎಂದು ದ.ಕ. ಜಿಲ್ಲಾ ಕಾರ್ಮಿಕ ಸಂಘಗಳ ಜಂಟಿ ಸಮಿತಿಯ ಸಂಚಾಲಕ ಬಿ. ಮಾಧವ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮುಷ್ಕರದ ಕರೆಗೆ ಎಲ್ಲ ವಿಭಾಗದ ಕಾರ್ಮಿಕರ ಮತ್ತು ನೌಕರರ ಸಂಘಟನೆಗಳಿಂದ ಬೆಂಬಲ ವ್ಯಕ್ತವಾಗಿದೆ. ದುಡಿಯುವ ವರ್ಗದ ಜನರ ಜ್ವಲಂತ ಸಮಸ್ಯೆಗಳನ್ನು ನಿವಾರಿಸುವ ನೆಲೆಯಲ್ಲಿ ಒಗ್ಗಟ್ಟಿನಿಂದ ಮುಷ್ಕರ ಹೂಡಲು ನಿರ್ಧರಿಸಲಾಗಿದೆ ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ದ.ಕ. ಜಿಲ್ಲಾ ಕಾರ್ಮಿಕ ಸಂಘಟನೆಗಳ ಪ್ರಮುಖರಾದ ಬಿ. ಶೇಖರ್, ಮಹಮ್ಮದ್ ರಫಿ, ವಿಶ್ವನಾಥ್ ಶೆಟ್ಟಿ, ವಸಂತ ಆಚಾರಿ, ರಾಘವೇಂದ್ರ ರಾವ್ ಮುಂತಾದವರು ಉಪಸ್ಥಿತರಿದ್ದರು.

# ಶ್ರೀದೇವಿ ಕಾಲೇಜಿಗೆ ಶೇ. 100 ಫಲಿತಾಂಶ

ಮಂಗಳೂರು, ಫೆ. 15: ನಗರದ ಶ್ರೀದೇವಿ ಎಜ್ಯುಕೇಶನ್ ಟ್ರಸ್ಟ್‌ನ ಅಂಗಸಂಸ್ಥೆ ಕೆಂಜಾರಿನಲ್ಲಿರುವ ಶ್ರೀದೇವಿ ತಾಂತ್ರಿಕ ವಿದ್ಯಾಲಯದ ಎಂ.ಟೆಕ್ ವಿಭಾಗವು (ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್) 3ನೇ ಸೆಮಿಸ್ಟರ್‌ನಲ್ಲಿ ಶೇ. 100 ಫಲಿತಾಂಶ ಪಡೆದುಕೊಂಡಿದೆ. 2012ರ ಡಿಸೆಂಬರ್ ತಿಂಗಳಲ್ಲಿ ನಡೆದ ವಿಟಿಯು ಪರೀಕ್ಷೆಯಲ್ಲಿ 18 ವಿದ್ಯಾರ್ಥಿಗಳಲ್ಲಿ ಶೇ. 83 ಉನ್ನತ ಶ್ರೇಣಿ ಹಾಗೂ ಶೇ. 17 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

# ಆರೋಗ್ಯ ಶಿಬಿರ ಮುಂದೂಡಿಕೆ

ಉಡುಪಿ, ಫೆ.15: ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ವಯ ಫೆ.17ರಂದು ಆಯೋಜಿಸಲಾದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ।ರಾಮಚಂದ್ರ ಬಾಯರಿ ತಿಳಿಸಿದ್ದಾರೆ.

# ಪಿಯು ಪರೀಕ್ಷೆ: ಸೂಚನೆ

ಉಡುಪಿ/ಮಂಗಳೂರು, ಫೆ.15: ದ್ವಿತೀಯ ಪಿಯುಸಿ ಪರೀಕ್ಷೆಯ ಪ್ರವೇಶಪತ್ರ ಮತ್ತು ಕೇಂದ್ರಗಳ ದಾಖಲೆ ಬಂದಿದ್ದು ಇದನ್ನು ಕೂಡಲೇ ಪಡೆದುಕೊಳ್ಳಬೇಕೆಂದು ಪ.ಪೂ. ಕಾ. ಪ್ರಾಂಶುಪಾಲರಿಗೆ ಡಿಡಿಪಿಯು ತಿಳಿಸಿದ್ದಾರೆ.



























































